ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ,
ಚಿಕ್ಕಮಗಳೂರು.

ಎಂ.ವಿ.ಸಿ ನಂ.106/2025

| | | |
|---|---|---|
| ಸಾಕ್ಷಿದಾರರ ಹೆಸರು | ಕುಮಾರ್ ನಾಯಕ್ | ಸಿ.ಡಬ್ಲ್ಯೂ.1 |
| ತಂದೆಯ ಹೆಸರು | ಲೇಟ್ ಕೃಷ್ಣಾನಾಯಕ್ | |
| ವಯಸ್ಸು | 58 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸ | ಅಗ್ರಹಾರ ತಾಂಡ್ಯ, ಕಡೂರು ತಾಲ್ಲೂಕು | |

ದಿನಾಂಕಃ 20-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಅರ್ಜಿ ನಂ.1 ರ ಮೇಲೆ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದಃ-

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದು.

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ 3 ನೇ ಎದುರುದಾರ ಪರ ವಕೀಲರಿಂದಃ-

ನನಗೆ 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅಪಘಾತದ ನಂತರ ನಾನು ಕೂಡಲೇ ಚಿಕ್ಕಮಗಳೂರಿನ ಹೋಲಿಕ್ರಾಸ್ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ನಾನು 3 ರಿಂದ 4 ದಿನ ಒಳರೋಗಿಯಾಗಿ ದಾಖಲಾಗಿರುತ್ತೇನೆ. ನಾನು ಸಖರಾಯಪಟ್ಟಣಕ್ಕೆ ಹೋಗಿ ನಂತರ

MVC No.106/2025
CW-1

ಚಿಕ್ಕಮಗಳೂರಿಗೆ ಬರಬೇಕು ಎಂದರೆ ಸರಿ. ಈ ಅಪಘಾತದ ಬಗ್ಗೆ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿರುವ ಬಗ್ಗೆ ಗೊತ್ತಿತ್ತು. ಸದರಿ ಪ್ರಕರಣದಲ್ಲಿ ನನ್ನನ್ನು ಆರೋಪಿಯನ್ನಾಗಿ ಮಾಡಲಾಗಿರುತ್ತದೆ ಎಂದರೆ ಸರಿ. ನಾನು ಚಿಕಿತ್ಸೆಯ ನಂತರ 3 ತಿಂಗಳು ವಿಶ್ರಾಂತಿಯಲ್ಲಿ ಇದ್ದೆನು. ನಂತರ ನಾನು ದಾಖಲೆಗಳನ್ನು ಪಡೆದುಕೊಂಡು ನನ್ನ ವಕೀಲರಿಗೆ ನೀಡಿರುತ್ತೇನೆ. ನಾನು ಕಾಲಮಿತಿಯೊಳಗೆ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಮಧ್ಯಂತರ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರು ಏಕಪಕ್ಷೀಯ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ,ಚಿಕ್ಕಮಗಳೂರು.

ಎಸ್ಆರ್ಃ

MVC No.106/2025
CW-1